ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಯಲಹಂಕ ವಿಧಾನ ಸಭಾ ಕ್ಷೇತ್ರದ ಮನೆ ಹಂಚಿಕೆ ಕುರಿತು

ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

1074 (1206) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಯಲಹಂಕ ವಿಧಾನ ಸಭಾ ಕ್ಷೇತ್ರದ ದಾಸನಪುರ ಹೋಬಳಿ ದಾಸನಪುರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಶಿವನಪುರ ಗ್ರಾಮದಲ್ಲಿ ವಸತಿ ಇಲಾಖೆಯಿಂದ ಯಾವ ಯಾವ ಯೋಜನೆಯಡಿ ಸನ್ 2000 ದಿಂದ ಈಚೆಗೆ ಎಷ್ಟು ಆಶ್ರಯ ಮನೆಗಳನ್ನು ನಿರ್ಮಾಣ ಮಾಡಲಾಗಿದೆ;

(ಆ) ಎಷ್ಟು ಮನೆಗಳನ್ನು ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ನೀಡಲಾಗಿದೆ;

(ಇ) ಹಂಚಿಕೆಯಾಗದೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು;

(ಈ) ಫಲಾನುಭವಿಗಳ ಪ್ರತಿ ಹಾಗೂ ಅವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನ/ಮನೆಯ ಸಂಖ್ಯೆಯ ಪಟ್ಟಿಯನ್ನು ವಿವರದೊಂದಿಗೆ ನೀಡುವುದು;

(ಉ) ಸಿ.ಎ. ಸೈಟ್‌ಗಳ ಸಂಖ್ಯೆ ಎಷ್ಟು; ಹಂಚಿಕೆ ಮಾಡಲಾದ ಸೈಟ್‌ಗಳ ಸಂಖ್ಯೆ ಎಷ್ಟು;

(ಊ) ಹಂಚಿಕೆಯಾಗದೆ ಉಳಿದಿರುವ ಸೈಟ್‌ಗಳ ಸಂಖ್ಯೆ ಎಷ್ಟು? (ಪ್ರತಿಯೊಂದರ ವಿವರಗಳನ್ನು ಸೈಟ್‌ಗೆ ನಿಗಧಿಪಡಿಸಿದ ಸಂಖ್ಯೆಯೊಂದಿಗೆ ಒದಗಿಸುವುದು)